# ನಮ್ಮ ದರ್ಶನ

ಜ್ಯೋತಿ ನಿವಾಸ್ ಕಾಲೇಜು ಸ್ವಾಯತ್ತ | www.jyotinivas.org | ಹೊಸೂರು ರಸ್ತೆ ಬೆಂಗಳೂರು ೫೬೦೦೯೫

ಕ್ಯಾಂಪಸ್ ಸುದ್ದಿ ಪತ್ರಿಕೆ

ಸಂಚಿಕೆ । ಸಂಪುಟ । ಮಾರ್ಚ್ ೧೯ ೨೦೨೨


# ಕರ್ನಾಟಕ ದರ್ಶನ






ದೇಶದ ನಾನಾ ಮೂಲೆಗಳಿಂದ ಆಗಮಿಸಿದ್ದ ನ್ಯಾಕ್ ಸಮಿತಿಯ ಸದಸ್ಯರುಗಳಿಗೆ ಕರ್ನಾಟಕದ ಸಂಸ್ಕೃತಿಯನ್ನು ಪರಿಚಯಿಸುವ ಉದ್ದೇಶದಿಂದ "ಕರ್ನಾಟಕ ದರ್ಶನ" ಎಂಬ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕದ ಉಡುಗೆ ತೊಡುಗೆ, ಆಹಾರ ಪದ್ಧತಿ, ಹಬ್ಬಹರಿದಿನ, ಜಾನಪದ ಕಲೆ, ಆಟ ಮತ್ತು ಜೀವನಕ್ರಮಗಳನ್ನು ಕರ್ನಾಟಕ ದರ್ಶನದಲ್ಲಿ ಪ್ರದರ್ಶಿಸಲಾಗಿತ್ತು. ಮುಖ್ಯವಾಗಿ ಕರ್ನಾಟಕದ ವಿವಿಧ ಮೂಲೆಗಳ ಕೃಷಿ ಸಂಸ್ಕೃತಿಯನ್ನು ಪರಿಚಯಿಸಿ ಕೊಡಲಾಯಿತು.

ಪ್ರದರ್ಶನಕ್ಕೆ ಆಗಮಿಸಿದ ಗಣ್ಯ ಅತಿಥಿಗಳು ಕನ್ನಡ ವಿಭಾಗದ ಈ ಪರಿಶ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಗಣ್ಯ ಅತಿಥಿಗಳಲ್ಲದೆ ಕರ್ನಾಟಕದ ಹೊರಗಿನಿಂದ ಆಗಮಿಸಿದ್ದ ವಿದ್ಯಾರ್ಥಿಗಳೂ ಸಹ ಪ್ರದರ್ಶನವನ್ನು ಕಂಡು ಅಚ್ಚರಿ ಪಟ್ಟರು.

ಕರ್ನಾಟಕದ ತಿಂಡಿ–ತಿನಿಸುಗಳನ್ನು ಪ್ರದರ್ಶನದಲ್ಲಿ ಇರಿಸಲಾಗಿತ್ತಲ್ಲದೇ, ಆಗಮಿಸಿದ್ದ ಎಲ್ಲ–ರಿಗೂ ಕರ್ನಾಟಕದ ತಿಂಡಿ–ತಿನಿಸುಗಳನ್ನು ನೀಡಿ ಸತ್ಕ–ರಿಸಲಾಯಿತು. ಅಂದಿನ ಪ್ರಾಂಶುಪಾಲರಾಗಿದ್ದ ಸೋದರಿ ಡಾ. ಸಿ.ಎಸ್. ಎಲಿಜಬೆತ್ ಅವರು ಪ್ರದರ್ಶನವನ್ನು ಉದ್ಘಾಟಿಸಿದ್ದರು.

# ಮಹಿಳಾ ದಿನಾಚರಣೆ



ಮಹಿಳಾ ದಿನಾಚರಣೆಯ ಚರ್ಚಾ ಸ್ಪರ್ಧೆ ಸಮಾರಂಭ

ವಿಶ್ವ ಮಹಿಳಾ ದಿನಾಚರಣೆಯ ಪ್ರಯುಕ್ತ ಕನ್ನಡ ವಿಭಾಗವು 16ನೇ ಮಾರ್ಚ್ 2022ರಂದು ಬೆಳಿಗ್ಗೆ 10.00 ರಿಂದ 12.00 ಗಂಟೆಗಳವರೆಗೆ ವಿದ್ಯಾರ್ಥಿಗಳಿಗಾಗಿ ಚರ್ಚಾಸ್ಪರ್ಧೆಯನ್ನು ಹಮ್ಮಿಕೊಂಡಿತ್ತು.

"ಸಾಂಪ್ರದಾಯಿಕ ಮೌಲ್ಯಗಳು ಹೆಣ್ಣಿನ ಸ್ಥಿತಿಗತಿಗಳನ್ನು ಸುಧಾರಿಸಬಲ್ಲವು" ಎಂಬ ಶೀರ್ಷಿಕೆಯ ಅಡಿಯಲ್ಲಿ ಇದನ್ನು ನಡೆಸಲಾಯಿತು. ಪ್ರವಾಸೋದ್ಯಮ ವಿಭಾಗದ ಸಹಾಯಕ ಪ್ರಾಧ್ಯಾಪಕ ಪ್ರೊ. ಪ್ರಕಾಶ ಎನ್. ಹಾಗೂ ಭೌತಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಅರ್ಚನಾ ಅವರು ಚರ್ಚಾಸ್ಪರ್ಧೆಯ ತೀರ್ಪುಗಾರರಾಗಿ ಆಗಮಿಸಿದ್ದರು. ಈ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ವಿಷಯದ ಪರ–ವಿರೋಧದ ನೆಲೆಗಳಲ್ಲಿ ತಮ್ಮ ವಾದವನ್ನು ಮಂಡಿಸಿದರು. ಕಾರ್ಯಕ್ರಮದ ಕೊನೆಗೆ ತೀರ್ಪು ನೀಡುವ ಮುನ್ನ ತೀರ್ಪುಗಾರರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು, ಚರ್ಚೆಯನ್ನು ಮಂಡಿಸುವ ವಿಧಾನದ ಕುರಿತು ವಿದ್ಯಾರ್ಥಿಗಳಿಗೆ ತಿಳಿವಳಿಕೆ ನೀಡಿದರು.

# ಕನ್ನಡ ರಾಜ್ಯೋತ್ಸವ ಸಮಾರಂಭ







ಡಾ. ಸಹೋದರಿ ಲಲಿತಾ ಥಾಮಸ್, ಪ್ರಾಂಶುಪಾಲರು ಮತ್ತು ಮುಖ್ಯ ಅತಿಥಿ ಶ್ರೀಮತಿ ಆಶಾ ರಘುರವರು ದೀಪವನ್ನು ಬೆಳಗಿಸುವುದು

ನಮ್ಮ ಕನ್ನಡ ವಿಭಾಗದಲ್ಲಿ 19ನೇ ನವೆಂಬರ್ 2021ರಂದು "ಕನ್ನಡ ರಾಜ್ಯೋತ್ಸವ" ವನ್ನು ಹಮ್ಮಿಕೊಳ್ಳಲಾಗಿತ್ತು. ಕಾಲೇಜಿನ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ನಮ್ಮ ಪ್ರಾಂಶುಪಾಲರಾದ ಸೋದರಿ ಡಾ. ಲಲಿತಾ ಥಾಮಸ್ ಅವರು ಅಧ್ಯಕ್ಷತೆ ವಹಿಸಿದ್ದರು. ನಾಡಿನ ಖ್ಯಾತ ಲೇಖಕಿ ಶ್ರೀಮತಿ ಆಶಾ ರಘು ಅವರನ್ನು ವಿಶೇಷ ಅತಿಥಿಯನ್ನಾಗಿ ಆಹ್ವಾನಿಸಲಾಗಿತ್ತು. ಕೋವಿಡ್ ನಿಯಮಾವಳಿ ಜಾರಿಯಲ್ಲಿ ಇದ್ದಿದ್ದರಿಂದ ಕೆಲವೇ ಕೆಲವು ವಿದ್ಯಾರ್ಥಿ ಪ್ರತಿನಿಧಿಗಳು ಮತ್ತು ಬೋಧಕ–ಬೋಧಕೇತರ ವೃಂದದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಆದರೆ ಕಾರ್ಯಕ್ರಮವನ್ನು ಆನ್‌ಲೈನ್‌ನಲ್ಲಿ ನೇರ ಪ್ರಸಾರ ಮಾಡಲಾಯಿತಾದ ಕಾರಣ ನಮ್ಮ ಕಾಲೇಜಿನ ಸುಮಾರು 1750 ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಕಾರ್ಯಕ್ರಮವನ್ನು ವೀಕ್ಷಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಶ್ರೀಮತಿ ಆಶಾ ರಘು ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತ ಕರ್ನಾಟಕದ ಏಕೀಕರಣದ ಇತಿಹಾಸವನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಕರ್ನಾಟಕದ ಅಸ್ಮಿತೆಗೆ ಕಾರಣಕರ್ತರಾದ ಕನ್ನಡ ಹೋರಾಟಗಾರರ ತ್ಯಾಗ ಬಲಿದಾನಗಳನ್ನು ಪರಿಚಯಿಸಿಕೊಟ್ಟರಲ್ಲದೆ ಕರ್ನಾಟಕ ಮತ್ತು ಕನ್ನಡದ ಸಂಸ್ಕೃತಿಯ ಹಿರಿಮೆ–ಗರಿಮೆಗಳನ್ನು ಸಭಿಕರಿಗೆ ಮನಗಾಣಿಸಿದರು.

ವಿದ್ಯಾರ್ಥಿಗಳು ಹಾಡು ನೃತ್ಯ ಸಮೂಹ ಗಾಯನ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಪ್ರಾಂಶುಪಾಲರಾದ ಸೋದರಿ ಡಾ. ಲಲಿತಾ ಥಾಮಸ್ ಅವರು ಕರ್ನಾಟಕದ ತಮ್ಮ ಅನುಭವಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು. ಕನ್ನಡಿಗರ ಔದಾರ್ಯ ಮತ್ತು ಕರ್ನಾಟಕ ತಮಗೆ ನೀಡಿರುವ ಪ್ರೀತಿ–ಆರೈಕೆಗಳನ್ನು ಕೃತಜ್ಞತೆಯಿಂದ ಸ್ಮರಿಸಿದರು.

ಇದೇ ಸಂದರ್ಭದಲ್ಲಿ ಡಾ. ಟಿ.ಎನ್. ವಾಸುದೇವಮೂರ್ತಿ ಅವರ "ಹರಿಲಾಲ್–ರಾಷ್ಟ್ರಪಿತನ ನತದೃಷ್ಟ ಮಗ" ಎಂಬ ಕೃತಿಯನ್ನು ಬಿಡುಗಡೆ ಮಾಡಲಾಯಿತು. ಅವರ ಮೂರು ವರ್ಷಗಳ ಅಧ್ಯಯನದ ಫಲವಾದ ಈ ಕೃತಿ ಮಹಾತ್ಮ ಗಾಂಧೀ–ಜಿಯವರ ಹಿರಿಯ ಮಗನಾದ ಹರಿಲಾಲ್ ಬದುಕಿನ ದುರಂತವನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡುವ ಅವರ ಜೀವನ ಚರಿತ್ರೆಯಾಗಿದೆ. ವಿಭಾಗದ ಮುಖ್ಯಸ್ಥರಾದ ಡಾ. ಗೂಳಪ್ಪ ವಕ್ಕುಂದ ಅವರು ಕಾರ್ಯಕ್ರಮದ ನಿರೂಪಣೆ ಮಾಡಿದರು. ಕನ್ನಡ ಸಹಾಯಕ ಪ್ರಾಧ್ಯಾಪಕಿ ಡಾ. ಎಂ.ವಿ. ಮಾನಸ ಅವರು ಸ್ವಾಗತ ಭಾಷಣ ಮಾಡಿದರು

# ಸಾಂಸ್ಕೃತಿಕ ಕಾರ್ಯಕ್ರಮಗಳು

ಪ್ರತಿ ವರ್ಷದಂತೆ ಈ ಶೈಕ್ಷಣಿಕ ವರ್ಷದಲ್ಲೂ ಫೆಬ್ರುವರಿ ತಿಂಗಳಲ್ಲಿ ಕನ್ನಡ ವಿಭಾಗ ವಿದ್ಯಾರ್ಥಿಗಳಿಗಾಗಿ ವಿವಿಧ ಸಾಂಸ್ಕೃತಿಕ ಚಟುವಟಿಕೆ ಹಾಗೂ ಸ್ಪರ್ಧೆಗಳನ್ನು ಆಯೋಜಿಸಿತ್ತು. ಮುಖ್ಯವಾಗಿ ಪ್ರಬಂಧ ಸ್ಪರ್ಧೆ, ಕಥಾಸ್ಪರ್ಧೆ ಮತ್ತು ಕವನ ರಚನಾ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು. ವಿದ್ಯಾರ್ಥಿಗಳು ಉತ್ಸಾಹದಿಂದ ಈ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಗೆದ್ದುಕೊಂಡರು.

# ಎನ್ ಇ ಪಿ ಅಭಿಪ್ರಾಯಗಳು



ಡಾ. ಸೀತವಿ ಯತೀಂದರ್



ಡಾ. ಶಾಂತಾ



ಡಾ. ಲಲಿತಾ ರಾಮನ್

ನಮ್ಮ ಉಪಪ್ರಾಂಶುಪಾಲರುಗಳಾದ ಡಾ. ಶಾಂತಾ, ಡಾ. ಸೀತವಿ ಯತೀಂದರ್ ಮತ್ತು ಡಾ. ಲಲಿತಾ ರಾಮನ್ ಅವರಿಗೆ ಈ ಕೆಳಗಿನ ಪ್ರಶ್ನೆಗಳನ್ನು ಕೇಳಲಾಗಿತ್ತು.

ನಿಮ್ಮ ಪ್ರಕಾರ ರಾಷ್ಟ್ರೀಯ ಶಿಕ್ಷಣ ನೀತಿ ಹೇಗೆ ಉಪಯುಕ್ತ?

ಡಾ. ಲಲಿತಾ ರಾಮನ್ ಅವರ ಉತ್ತರ : ಎನ್‌ಇಪಿಯಿಂದ ವಿದ್ಯಾರ್ಥಿಗಳಿಗೆ ಪೂರ್ಣ ಪ್ರಯೋಜನವಾಗಲಿದೆ. ಅದು ವಿದ್ಯಾರ್ಥಿ ಕೇಂದ್ರಿತ ನೀತಿಯಾಗಿದೆ. ಕಳೆದ ಮೂರು ನಾಲ್ಕು ದಶಕಗಳಿಂದಲೂ ನಮ್ಮ ಶೈಕ್ಷಣಿಕ ನೀತಿಯಲ್ಲಿ ಯಾವುದೇ ಹೊಸ ಬದಲಾವಣೆ ಆಗಿಲ್ಲ. ಇಂದಿನ ಹೊಸಕಾಲಕ್ಕೆ ಸೂಕ್ತವಲ್ಲದ ಅದೇ ಹಳೆಯ ನೀತಿಯನ್ನೇ ನಾವು ಇಷ್ಟು ಕಾಲ ಮುಂದುವರಿಸಿಕೊಂಡು ಬಂದಿದ್ದೇವೆ. ಈ ಹೊಸ ನೀತಿಯಾದರೂ ವಿದ್ಯಾರ್ಥಿಗಳಿಗೆ ಹಾಗೆಯೇ ಬೋಧಕರಿಗೆ, ಶೈಕ್ಷಣಿಕ ವಲಯದಲ್ಲಿ ಇರುವ ಎಲ್ಲರಿಗೂ ಬಹಳ ಪ್ರಯೋಜನಕಾರಿಯಾಗಲಿದೆ.

ನಿಮ್ಮ ಪ್ರಕಾರ ಎನ್‌ಇಪಿ ವಿದ್ಯಾರ್ಥಿ ಕೇಂದ್ರಿತವೋ ಅಥವಾ ಶಿಕ್ಷಕ ಕೇಂದ್ರಿತವೋ?

ಡಾ. ಸೀತವಿ ಯತೀಂದರ್ ಅವರ ಉತ್ತರ : ಎನ್‌ಇಪಿ ವಿದ್ಯಾರ್ಥಿ ಕೇಂದ್ರಿತ ಶಿಕ್ಷಣ ನೀತಿಯಾಗಿದೆ. 2020ನೇ ಶೈಕ್ಷಣಿಕ ವರ್ಷದಿಂದ ಎಲ್ಲ ವಿದ್ಯಾರ್ಥಿಗಳಿಗೂ ಸಮಾನ ಪಠ್ಯಕ್ರಮ ಇರುತ್ತದೆ. ತಾಯ್ತಂದೆಯರಿಗೆ ಉದ್ಯೋಗದಲ್ಲಿ ಆಗಾಗ ವರ್ಗಾವಣೆ ಆಗುವುದರಿಂದ ಮಕ್ಕಳು ತಾವು ಓದುವ ಕಾಲೇಜುಗಳನ್ನು ನಿರಂತರವಾಗಿ ಬದಲಾಯಿಸುತ್ತಿರುತ್ತಾರೆ. ಇಂತಹ ಮಕ್ಕಳು ರಾಷ್ಟ್ರದ ಯಾವುದೇ ಮೂಲೆಯಲ್ಲಿರುವ ಕಾಲೇಜಿಗೆ ಸೇ–ರಿಕೊಳ್ಳಬಹುದು ಮತ್ತು ಕ್ರೆಡಿಟ್ ಪಾಯಿಂಟ್‌ಗಳನ್ನು ಸಂಚಯಿಸಿಕೊಳ್ಳಬಹುದು.

ಎನ್‌ಇಪಿಯನ್ನು ಸೂಕ್ತ ಸಿದ್ಧತೆಯೊಂದಿಗೆ ಅನುಷ್ಠಾನಗೊಳಿಸಲಾಗಿದೆ ಎನ್ನುವಿರೇ? ಇದರ ಅನಾನುಕೂಲಗಳೇನು?

ಡಾ. ಶಾಂತಾ ಅವರ ಉತ್ತರ : ಎನ್‌ಇಪಿ ಘೋಷಣೆಯಾದಾಗ ನಮಗೆ ಸ್ವಲ್ಪ ಗಾಬ–ರಿಯಾದುದುಂಟು. ಹಿಂದಿನ ವರ್ಷವಷ್ಟೇ ಇದನ್ನು ಬಿಡುಗಡೆ ಮಾಡಲಾಗಿತ್ತು. ನಾವಿನ್ನೂ ಅದನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನದಲ್ಲಿದ್ದೆವು. ಆದರೆ ತಕ್ಷಣವೇ ಅನುಷ್ಠಾನಗೊಳಿಸಬೇಕೆಂದು ಘೋಷಿಸಿದಾಗ ನಾವು ಸೂಕ್ತ ರೀತಿಯಲ್ಲಿ, ಅರ್ಥಪೂರ್ಣವಾಗಿ ಅನುಷ್ಠಾನ ಮಾಡಲು ನಾನಾ ಕ್ರಮಗಳನ್ನು ಕೈಗೊಂಡೆವು. ಮಾತ್ರವಲ್ಲ, ಎನ್‌ಇಪಿಯನ್ನು ಅರ್ಥ ಮಾಡಿಕೊಳ್ಳಲು ಕರ್ನಾಟಕ ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ನಗರ ವಿಶ್ವವಿದ್ಯಾಲಯಗಳು ನಡೆಸಿದ ಹಲವು ಸಭೆ, ಸೆಮಿನಾರ್, ಕಾರ್ಯಾಗಾರಗಳಲ್ಲೂ ಭಾಗವಹಿಸಿದೆವು. ಮುಂದಿನ ಮೂರು–ನಾಲ್ಕು ವರ್ಷಗಳೊಳಗೆ ಎನ್‌ಇಪಿ ಫಲಪ್ರದವಾಗಿ, ಅರ್ಥಪೂರ್ಣವಾಗಿ ಜಾರಿಗೊಳ್ಳಲು ಹಾಗೂ ಶೈಕ್ಷಣಿಕ ಪ್ರಗತಿ ಸಾಧಿಸಲು ಕ್ರಮ ಕೈಗೊಳ್ಳುತ್ತೇವೆ.


ಆಯೋಜನೆ : ಕನ್ನಡ ವಿಭಾಗ । ಪುಟ ವಿನ್ಯಾಸ: ಕಾವ್ಯ ಪಚ್ಚಪ್ಪ । ಸಂದರ್ಶಕಿ: ಮೇಘನಾ ರಾಮದಾಸ್

ಪ್ರಕಟಣೆ : ಮಾಧ್ಯಮ ಅಧ್ಯಯನಗಳು ಕೇಂದ್ರ, ಕನ್ನಡ ವಿಭಾಗದ ಸಹಯೋಗದೊಂದಿಗೆ